ಶ್ರೀ ಜೆ. ಹೆಚ್. ಪಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವ ವಿಷಯದ ಬಗ್ಗೆ ಪರಿಶೀಲನೆ ಮಾಡಿ, ಅಲ್ಲಿಗೆ ತಕ್ಷಣ ಅಧಿಕಾರಿಗಳನ್ನು ಕಳುಹಿಸುವುದಕ್ಕೆ ಹೇಳುತ್ತೇನೆ. ಈ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಕಳಿಸಲು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುತ್ತೇನೆ. ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆ ಎನ್ನುವ ಬಗ್ಗೆ ಅವರು ವಿವರ ಕೊಡುತ್ತಾರೆ:

ನಿಯಮ ೩೩ಳಿರ ಮೇರೆಗೆ

೧) ಸವದತ್ತಿ ತಾಲ್ಲೂಕು ಮರಕಂಬಿ ಗ್ರಾಮದಿಂದ ಕಾರಿಮನಿವರೆಗೆ ರಸ್ತೆಯನ್ನು ನಿರ್ಮಿಸುವ ಬಗ್ಗೆ

ಶ್ರೀ ಶಿವಾನಂದ ಎಚ್. ಕೌಜಲಗಿ. (ಬೈಲ ಹೊಂಗಲ).—ಮಾನ್ಯ ಅಧ್ಯಕ್ಷರೇ. ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕ್ ಪೈಕಿ ಮರಕುಂಬಿ ಗ್ರಾಮದಿಂದ ಕಾರಿಮನಿವರೆಗೆ ವಾಯೂ ಚಿಕ್ಕೊಪ್ಪ ರಸ್ತೆಯಂ ಇರುವುದಿಲ್ಲ. ಈ ರಸ್ತೆಯನ್ನು ಮಾಡುವುದರಿಂದ ಅತೀ ಹಿಂದುಳಿದ ಪ್ರದೇಶದ ಜನರಾದ ಕಾರಿಮನಿ ಜನರಿಗೆ ಅನುಕೂಲವಾಗುವುದು. ಈ ಊರು ಪಶ್ಚಿಮ ಘಟ್ಟ ಅಡಿಯಲ್ಲಿ ಬರುವುದು. ಬೆಳಗಾವಿ ಜಿಲ್ಲೆಯ ಪಶ್ಚಿಮ ಘಟ್ಟ ಅಡಿಯಲ್ಲಿ ಖರ್ಚಾಗದೇ ಉಳಿದಿರುವ ಹಣದಲ್ಲಿ ಆಗಲಿ ಅಥವಾ ಮುಂದಿನ ವರ್ಷದ ಪಶ್ಚಿಮ ಘಟ್ಟದ ಯೋಜನೆಯಲ್ಲಿ ' ಈ ಕೆಲಸ ತೆಗೆದುಕೊಂಡಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅತೀ ಅವಶ್ಯವಿದ್ದುದ್ದರಿಂದ ಈ ಕೆಲಸ ತೆಗೆದುಕೊಳ್ಳಬೇಕೆಂದು ನಾನು ಗ್ರಾಮೀಣ ಅಭಿವೃದ್ಧಿ ಸಚಿವರ ಗಮನವನ್ನು ತಮ್ಮ ಮುಖಾಂತರ ಸೆಳೆಯುತ್ತೇನೆ.

ಶ್ರೀ ಸಿದ್ಧರಾಮಯ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ಸದಸ್ಯರಿಗೆ ತರಿಸಿ ಕೊಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ (ಅಬ್ಸೆಂಟ್)

೨) ಬಂಟ್ವಾಳ ತಾಲ್ಲೂಕಿನಲ್ಲಿ ವಿದ್ಯುತ್ ಬಳಕೆದಾರರ ಸಹಕಾರಿ ಸಂಘವನ್ನು ಸ್ಥಾಪನೆ ಮಾಡುವುದು

ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಂ ಬಂಟ್ವಾಳ ತಾಲ್ಲೂಕಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರದ ಸಹಕಾರದಿಂದ ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಮಾದರಿಯಲ್ಲಿ ವಿದ್ಯುತ್ ಬಳಕೆದಾರರ ಸಹಕಾರಿ ಸಂಘವನ್ನು ಸ್ಥಾಪನೆ ಮಾಡಲು ಸರಕಾರ ತೀರ್ಮಾನ ಮಾಡಿತ್ತು. ಈ ಸಂಘದ ಸ್ಥಾಪನೆ ಮಾಡುವರು ಚೀಫ್ ಪ್ರಮೋಟರ್ ಆಗಿ ನಮ್ಮ ಜಿಲ್ಲೆಯ ಹಿರಿಯ ಸಹಕಾರಿ ಧುರೀಣರಾದ ಮಾನ್ಯ ಶ್ರೀ ಬಂಟ್ವಾಳ ನಾರಾಯಣ ನಾಯಕರ ನಾಯಕತ್ವದಲ್ಲಿ ಸುಮಾರು ೩೦, ೦೦೦ (ಮೂವತ್ತು ಸಾವಿರ) ಪಾಲು ಬಂಡವಾಳವನ್ನು ಬಳಕೆ ದಾರರಿಂದ ಒಟ್ಟು ಮಾಡಲಾಗಿತ್ತು. ಈ ಸಂಘಕ್ಕೆ ಸರಕಾರ ಜಲ್ಲಾಧಿಕಾರಿಯವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಕೆಲವು ಜನ ನಿರ್ದೇಶಕರನ್ನು ನಾಮಕರಣ ಮಾಡಲಾಗಿತ್ತು. ಆದರೆ ಈ ಸಂಘವು ಇನ್ನೂ ಪ್ರಾರಂಭ ಹಂತದಲ್ಲಿಯೇ ಇರುವುದು ಶೋಚನೀಯ ಸಂಗತಿಯಾಗಿದೆ. ಆದುದರಿಂದ ಇದನ್ನು ಜೀವಂತಗೊಳಿಸುವರೆಂದು ಮಾನ್ಯ ವಿದ್ಯುತ್ ಸಚಿವರು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೀಲ್.—ಮಾನ್ಯ ಅಧ್ಯಕ್ಷರೇ, ಇದು ಕೋ-ಆಪರೇಟೀವ್ ಮಂತ್ರಿಗಳಿಗೆ ಹೋಗುತ್ತದೆ.

ಶ್ರೀ ಬಿ. ರಮಾನಾಥ ರೈ.—ಕಳೆದ ಸಾರಿ ಸಹಕಾರ ಮಂತ್ರಿಗಳನ್ನು ಕೇಳಿದಾಗ ಇದು ತಮ್ಮ ಇಲಾಖೆಗೆ ಬರುತ್ತದೆಂದು ಹೇಳಿದ್ದರು.

ಅಧ್ಯಕ್ಷರು.—ಅವರು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆಂದು ಹೇಳಿದ್ದಾರೆ.